ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 47 ಆರ್‌ಐಪಿ[2] 2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 20/09/2018.

**:ಸುತ್ತೋಲೆ:**

**ವಿಷಯ:** ಕರ್ನಾಟಕ ವ್ಯವಸಾಯ ಹಾಗೂ ಇತರೇ ಉಪಕರಣಗಳ ಸಣ್ಣ ಕೈಗಾರಿಕೆ ರಿ, ದಲಿತ ನಿರುದ್ಯೋಗಿಗಳ ಸಂಸ್ಥೆ, ಗೋಕುಲಂ, ಮೈಸೂರು ಇವರ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡುವ ಬಗ್ಗೆ.

**ಉಲ್ಲೇಖ:** 1.ಸರ್ಕಾರದ ಪತ್ರ ಸಂಖ್ಯೆ: ಇಡಿ 44 ವಿವಿಧ 2018, ದಿನಾಂಕ: 05-09-2018.
2.ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 208 ಪಬವ 2017, ದಿನಾಂಕ: 11-10-2017.

-0-

ಶ್ರೀ ಬಿ.ಸಿ.ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೇ ಉಪಕರಣಗಳ ಸಣ್ಣ ಕೈಗಾರಿಕೆ ರಿ, ದಲಿತ ನಿರುದ್ಯೋಗಿಗಳ ಸಂಸ್ಥೆ, ಗೋಕುಲಂ, ಮೈಸೂರು ರವರು ದಿನಾಂಕ: 20-07-2018 ರ ಮನವಿಯ ಪತ್ರದಲ್ಲಿ ಕೋರಿರುವ ಅಂಶಗಳ ಬಗ್ಗೆ ನಿಯಾಮಾನುಸಾರ ಕ್ರಮಕೈಗೊಳ್ಳುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರು ದಿನಾಂಕ: 23-07-2018 ರ ಪತ್ರದಲ್ಲಿ ಸಲ್ಲಿಸಿರುತ್ತಾರೆಂದು ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ತಿಳಿಸಿರುತ್ತಾರೆ, ಆದ್ದರಿಂದ ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸಂಸ್ಥೆಗಳು ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡುವಾಗ, ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಅನುಪಯುಕ್ತ ವಸ್ತುಗಳಿಗೆ ನಿಗಧಿಪಡಿಸಿರುವ ಬೆಲೆಗಿಂತ 26 ರಷ್ಟು ಹೆಚ್ಚಿನ ಬೆಲೆಗೆ ನಿಯಾಮಾನುಸಾರ ವಿಲೇವಾರಿ ಮಾಡಲು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

ಇವರಿಗೆ,

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ.
2. ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

ಲಗತ್ತು: ಸರ್ಕಾರದ ಆದೇಶ ಪ್ರತಿ ಲಗತ್ತಿಸಿದೆ.

ಪ್ರತಿ.
1. ಬಿ.ಸಿ. ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೇ ಉಪಕರಣಗಳ ಸಣ್ಣ ಕೈಗಾರಿಕೆ ರಿ, ದಲಿತ ನಿರುದ್ಯೋಗಿಗಳ ಸಂಸ್ಥೆ, ಗೋಕುಲಂ, ಮೈಸೂರು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಹಾಗೂ ಮೈಸೂರು ಕಛೇರಿಯ ಹಾಗೂ ಅಧೀನ ಕಛೇರಿಗಳಲ್ಲಿ ಹಳೆ ಅನುಪಯುಕ್ತ ವಸ್ತುಗಳನ್ನು ಜಮುನಾ ವಿವಿಧ್ದೋದ್ದೇಶಗಳ ಸಹಕಾರ ಸಂಘ ನಿಯಮಿತ, ವಿಜಯಪುರ ಈ ಸಂಸ್ಥೆಗೆ ನೀಡುವ ಬಗ್ಗೆ.

ಓದಲಾಗಿದೆ:
1. ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕೆ ಸಂಸ್ಥೆ, ಮೈಸೂರು ಇವರ ಮನವಿ ದಿ:20.09.2017.
2. ಸರ್ಕಾರದ ಆದೇಶ ಸಂಖ್ಯೆ: ಬಿಡಿಡಬ್ಲೂ 1164 ಬಿಎಂಎಸ್ 2015, ದಿನಾಂಕ:25.10.2015.
3. ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಆದೇಶ ಸಂಖ್ಯೆ:Act(3)ವಾ.ವಿ CR129/2016-17(64091) ದಿ:18.04.2017.

******

ಪ್ರಸ್ತಾವನೆ:-

ಮೇಲೆ ಓದಲಾದ-(1)ರ ದಿನಾಂಕ 20.09.2017ರ ಮನವಿಯಲ್ಲಿ ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕೆ ಸಂಸ್ಥೆ, ಮೈಸೂರು ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕಚೇರಿಗಳಲ್ಲಿನ ಹಳೆಯ ಅನುಪಯುಕ್ತ ವಸ್ತುಗಳು ಅಂದರೆ ಹಳೆ ವಾಹನಗಳ ಟೈರ್, ಟ್ಯೂಬ್, ಬ್ಯಾಟರಿ ಯಂತ್ರೋಪಕರಣ ಪೈಪ್, ಜಿ.ಐ ಪೈಪ್ ಅನುಪಯುಕ್ತ ಕಬ್ಬಿಣ ಸಾಮಾಗ್ರಿ, ಸ್ಟೀಲ್ ಅಲ್ಯೂಮಿನಿಯಂ, ತಾಮ್ರ, ಹಿತ್ತಾಳೆ, ಪ್ಲಾಸ್ಟಿಕ್, ಮರದ ಸಾಮಾಗ್ರಿ, ಕಂಪ್ಯೂಟರ್ ಹಾಗೂ ಎಲೆಕ್ಟ್ರಾನಿಕ್ಸ್ ಸಾಮಾಗ್ರಿ ಹಾಗೂ ಟಿ & ಪಿ ಸಾಮಾಗ್ರಿಗಳನ್ನು ಖರೀದಿಸಲು ಇಚ್ಛಿಸಿದ್ದು, ಆದ್ದರಿಂದ ಬೆಂಗಳೂರು/ಮೈಸೂರು ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರುರವರು ಸಹ ಹಳೆಯ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಮೆ: ಜಮುನಾ ವಿವಿಧ್ದೋದೇಶಗಳ ಸಹಕಾರ ಸಂಘ ನಿಯಮಿತ., ವಿಜಯಪುರ ಇವರಿಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಈ ಕೆಳಕಂಡ ದರಗಳನ್ನು ನಿಗಧಿಪಡಿಸಿ, ದಿನಾಂಕ 25.10.2015ರಂದು ಆದೇಶ ಹೊರಡಿಸಲಾಗಿದೆ.

| ಕ್ರ ಸಂ. | ಸಾಮಗ್ರಿ ವಿವರ | ಪ್ರಮಾಣ | ದರ (ರೂ.ಗಳಲ್ಲಿ) |
|---|---|---|---|
| 1 | ತಾಮ್ರದ ಭಾಂಡೆಗಳು | ಪ್ರತಿ ಕೆ.ಜಿ.ಗೆ | 101-00 |
| 2 | ಹಿತ್ತಾಳೆ ಹಾಗೂ ಕಂಚಿನ ಭಾಂಡೆಗಳು | ಪ್ರತಿ ಕೆ.ಜಿ.ಗೆ | 60-00 |
| 3 | ಸ್ಟೀಲ್ ಭಾಂಡೆಗಳು | ಪ್ರತಿ ಕೆ.ಜಿ.ಗೆ | 15-00 |
| 4 | ಅಲ್ಯುಮಿನಿಯಂ ಭಾಂಡೆ ಹಾಗೂ ಸಾಮಾನುಗಳು | ಪ್ರತಿ ಕೆ.ಜಿ.ಗೆ | 35-00 |
| 5 | ಪ್ಲಾಸ್ಟಿಕ್ ವಸ್ತುಗಳು | ಪ್ರತಿ ಕೆ.ಜಿ.ಗೆ | 04-00 |
| 6 | ಖಾಲಿ ಚೀಲಗಳು | ಪ್ರತಿ ಚೀಲಕ್ಕೆ | 02-00 |
| 7 | ರದ್ದಿ ಪೇಪರ್‌ಗಳು | ಪ್ರತಿ ಕೆ.ಜಿ.ಗೆ | 03-50 |

| | | | |
|---|---|---|---|
| 8 | ಕಟ್ಟಿಗೆ ಸಾಮಗ್ರಿಗಳು | ಪ್ರತಿ ಕೆ.ಜಿ.ಗೆ | 04-50 |
| 9 | ಹಳೆ ಅನುಪಯುಕ್ತ ಕಬ್ಬಿಣದ ಬಿಡಿ ಭಾಗಗಳು ಹಾಗೂ ಜಿ.ಐ. ಪೈಪುಗಳು, ಕೈ ಪಂಪಿನ ಬಿಡಿ ಭಾಗಗಳು ಮತ್ತು ಸಿ.ಐ. ಸಾಮಗ್ರಿಗಳು ಹಾಗೂ ಟಿ & ಪಿ ಸಾಮಗ್ರಿಗಳು | ಪ್ರತಿ ಕೆ.ಜಿ.ಗೆ | 05-00 (ಪ್ರಸ್ತುತ ಪರಿಗಣಿಸ ಬೇಕಾದ ಬೆಲೆ ರೂ.06-00) |
| 10 | ಹಳೆಯ ಬ್ಯಾಟರಿಗಳು | ಪ್ರತಿ ಒಂದಕ್ಕೆ | 212-80 |

ಮೇಲೆ ಓದಲಾದ-(3)ರ ಆದೇಶದಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗರವರು ಹಳೆ ವಾಹನಗಳ ಟೈರ್, ಟ್ಯೂಬ್, ಬ್ಯಾಟರಿ ಯಂತ್ರೋಪಕರಣ ಪೈಪ್, ಜಿ.ಐ ಪೈಪ್ ಅನುಪಯುಕ್ತ ಕಬ್ಬಿಣ ಸಾಮಾಗ್ರಿ, ಸ್ಟೀಲ್ ಅಲ್ಯೂಮಿನಿಯಂ, ತಾಮ್ರ, ಹಿತ್ತಾಳೆ, ಪ್ಲಾಸ್ಟಿಕ್, ಮರದ ಸಾಮಾಗ್ರಿ, ಕಂಪ್ಯೂಟರ್ ಹಾಗೂ ಎಲೆಕ್ಟ್ರಾನಿಕ್ಸ್ ಸಾಮಾಗ್ರಿ ಹಾಗೂ ಟಿ & ಪಿ ಸಾಮಾಗ್ರಿಗಳನ್ನು ಈ ಕೆಳಕಂಡ ದರದಂತೆ ವಿಲೇವಾರಿ ಮಾಡಲು ದಿನಾಂಕ:18.04.2017ರಂದು ಆದೇಶವನ್ನು ಹೊರಡಿಸಿರುತ್ತಾರೆ.

| ಕ್ರ ಸಂ. | ಸಾಮಗ್ರಿಗಳ ವಿವರ | ಪ್ರಮಾಣ | ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ವಾಹನದ ಟೈರ್‌ಗಳು | 01 | 156-00 |
| 2 | ಒಡೆದು ಹೋದ ಟೈರ್‌ಗಳು | 01 | 38-00 |
| 3 | ಬ್ಯಾಟರಿಗಳು (ದೊಡ್ಡದು) | 01 | 400-00 |
| 4 | ಬ್ಯಾಟರಿಗಳು (ಸಣ್ಣದು) | 01 | 200-00 |
| 5 | ಯಂತ್ರೋಪಕರಣಗಳು, ಪೈಪ್‌ಗಳು ಇತ್ಯಾದಿ | 1 ಕೆ.ಜಿ.ಗೆ | 11-00 |
| 6 | ಅನುಪಯುಕ್ತ ಕಬ್ಬಿಣ ಸಾಮಗ್ರಿಗಳು ಇತ್ಯಾದಿ | 1 ಕೆ.ಜಿ.ಗೆ | 06-00 |
| 7 | ಸ್ಟೀಲ್, ಅಲ್ಯೂಮಿನಿಯಂ, ತಾಮ್ರ ಹಾಗೂ ಹಿತ್ತಾಳೆ | 1 ಕೆ.ಜಿ.ಗೆ | 62-00 |
| 8 | ಪ್ಲಾಸ್ಟಿಕ್, ಮರದ ಸಾಮಗ್ರಿಗಳು, ವೇಸ್ಟ್ ಪೇಪರ್ಸ್ ಹಾಗೂ ಕಂಪ್ಯೂಟರ್ ಹಾಗೂ ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳು | 1 ಕೆ.ಜಿ.ಗೆ | 04-00 |

ಮೇಲೆ ಓದಲಾದ (1)ರ ಪ್ರಸ್ತಾವನೆಯನ್ನು ಪರಿಶೀಲಿಸುತ್ತ, ಮೇಲೆ ಓದಲಾದ (2) ಮತ್ತು (3)ರ ಆದೇಶಗಳಲ್ಲಿ ವಿಧಿಸಿರುವ ಷರತ್ತಿಗೊಳಪಟ್ಟು ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಅಧೀನದಲ್ಲಿ ಬರುವ ಎಲ್ಲಾ ಜಿಲ್ಲಾ ಪಂಚಾಯತಿಯಲ್ಲಿನ ಅಧೀನ ಕಚೇರಿಗಳಲ್ಲಿರುವ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕೆ ಸಂಸ್ಥೆ, ಮೈಸೂರು ಇವರಿಗೆ ವಹಿಸಲು ಮಂಜೂರಾತಿ ನೀಡಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 208 ಪಬವ 2017, ದಿನಾಂಕ:-11.10.2017</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಅಧೀನದಲ್ಲಿ ಬರುವ ಎಲ್ಲಾ ಜಿಲ್ಲಾ ಪಂಚಾಯತಿಯಲ್ಲಿನ ಅಧೀನ ಕಚೇರಿಗಳಲ್ಲಿರುವ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕೆ ಸಂಸ್ಥೆ, ಮೈಸೂರು ಇವರಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ವಹಿಸಿ, ಆದೇಶಿಸಿದೆ.

1) ಅನುಪಯುಕ್ತ ವಸ್ತುಗಳ ದರಗಳ ವಿವರ ಈ ಕೆಳಕಂಡಂತಿದೆ:-

| ಕ್ರ ಸಂ. | ಸಾಮಗ್ರಿಗಳ ವಿವರ | ಪ್ರಮಾಣ | ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ವಾಹನದ ಟೈರ್‌ಗಳು | 01 | 156-00 |
| 2 | ಒಡೆದು ಹೋದ ಟೈರ್‌ಗಳು | 01 | 38-00 |
| 3 | ಬ್ಯಾಟರಿಗಳು (ದೊಡ್ಡದು) | 01 | 400-00 |

| | | | |
|---|---|---|---|
| 4 | ಬ್ಯಾಟರಿಗಳು (ಸಣ್ಣದು) | | 200-00 |
| 5 | ಯಂತ್ರೋಪಕರಣಗಳು, ಪೈಪ್‌ಗಳು ಇತ್ಯಾದಿ | 1 ಕೆ.ಜಿ.ಗೆ | 11-00 |
| 6 | ಅನುಪಯುಕ್ತ ಕಬ್ಬಿಣ ಸಾಮಗ್ರಿಗಳು ಇತ್ಯಾದಿ | 1 ಕೆ.ಜಿ.ಗೆ | 06-00 |
| 7 | ಅಲ್ಯೂಮಿನಿಯಂ, ತಾಮ್ರ ಹಾಗೂ ಹಿತ್ತಾಳೆ | 1 ಕೆ.ಜಿ.ಗೆ | 62-00 |
| 8 | ಪ್ಲಾಸ್ಟಿಕ್, ಮರದ ಸಾಮಗ್ರಿಗಳು, ವೇಸ್ಟ್ ಪೇಪರ್ಸ್ ಹಾಗೂ ಕಂಪ್ಯೂಟರ್ ಹಾಗೂ ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳು | 1 ಕೆ.ಜಿ.ಗೆ | 04-00 |

2) ಮೇಲ್ಕಂಡ ಅನುಪಯುಕ್ತ ವಸ್ತುಗಳಿಗೆ ನಿಗಧಿಪಡಿಸಿರುವ ಬೆಲೆಗಿಂತ ಶೇಕಡಾ-26ರಷ್ಟು ಹೆಚ್ಚಿನ ಬೆಲೆಗೆ ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕೆ ಸಂಸ್ಥೆ, ಮೈಸೂರು ಇವರಿಗೆ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದೆ ಹಾಗೂ ನಿಯಮಾನುಸಾರ ತೆರಿಗೆಯನ್ನು ಪಡೆಯತಕ್ಕದ್ದು;

3) ಮೊದಲ ಎರಡು ವರ್ಷಗಳು ಸಂಘಕ್ಕೆ ವಿಲೇವಾರಿ ಮಾಡುವುದು. ತದನಂತರ ಒಂದು ವರ್ಷ ಬಿಡ್ ಮುಖಾಂತರ ವಿಲೇ ಮಾಡತಕ್ಕದ್ದು;

4) ಸದರಿ ಸಂಘವು ಈ ತರಹದ ವಸ್ತುಗಳನ್ನು ಖರೀದಿಸಿದ ಮೇಲೆ ಅದನ್ನು ಸದರಿ ಸಂಘದ ಸದಸ್ಯರುಗಳಿಂದ ಕಚ್ಚಾ ಮಾಲಾಗಿ ವಿಲೇವಾರಿ ಮಾಡತಕ್ಕದ್ದು;

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 1996 ದಿನಾಂಕ 10.07.1996 ಇಲಾಖಾ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/10/17.

(ಡಿ.ಎಸ್.[illegible])
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿ:-

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ/ಬೆಂಗಳೂರು ಗ್ರಾಮಾಂತರ/ರಾಮನಗರ/ಚಿಕ್ಕಬಳ್ಳಾಪುರ/ಕೋಲಾರ/ತುಮಕೂರು/ಶಿವಮೊಗ್ಗ/ಚಿತ್ರದುರ್ಗ/ದಾವಣಗೆರೆ ಜಿಲ್ಲೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು/ಮಂಡ್ಯ/ಚಾಮರಾಜನಗರ/ಹಾಸನ/ಮಡಿಕೇರಿ/ಚಿಕ್ಕಮಗಳೂರು/ಉಡುಪಿ/ದಕ್ಷಿಣ ಕನ್ನಡ ಜಿಲ್ಲೆ.
4) ಅಧ್ಯಕ್ಷರು, ಕರ್ನಾಟಕ ವ್ಯವಸಾಯ ಹಾಗೂ ಇತರೆ ಉಪಕರಣಗಳ ಸಣ್ಣ ಕೈಗಾರಿಕೆ ಸಂಸ್ಥೆ, ಮೈಸೂರು
5) ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6) ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಕೇಂದ್ರ, 2ನೇ ಮಹಡಿ, ಸೌತ್ ಬ್ಲಾಕ್, ಖನಿಜ ಭವನ, ದೇವರಾಜ ಅರಸು ರಸ್ತೆ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ(ಆಡಳಿತ), ಗ್ರಾ.ಅ.&ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.